


ಚಟ್ನಿಯನ್ನು ಉಚಿತವಾಗಿ ಉಣಬಡಿಸುತ್ತಿದ್ದರು. 'ನಾಲ್ಕಾಣೆಗೆ ಊಟ, ತಟ್ಟೆಯಲ್ಲಿ ಊಟ ಬಿಟ್ಟರೆ ಎಂಟಾಣೆ ದಂಡ' ಎಂಬ ಬೋರ್ಡ್ ಬರೆಸಿ ಹಾಕಿದ್ದರು. ಆ ನಿಯಮವನ್ನು ಚಾಚುತಪ್ಪದೆ ಪಾಲಿಸಿ ಅನ್ನ ಆಹಾರಗಳು ಕಸದಬುಟ್ಟಿ ಸೇರದಂತೆ ಜಾಗ್ರತೆ ವಹಿಸಿದ್ದರು. ಮಾಜಿ ಸಚಿವ ಜನಾರ್ದನ ಪೂಜಾರಿ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದ ರಾಮಪ್ಪಣ್ಣ ಅನಕ್ಷರಸ್ಥರಾದರೂ ಬಡವರಪರವಾಗಿ ಭೂಸುಧಾರಣಾ ವ್ಯಾಜ್ಯಗಳನ್ನು ಕಾನೂನಾತ್ಮಕವಾಗಿ ವಾದಿಸಲು ಜನಾರ್ದನ ಪೂಜಾರಿ ಅವರನ್ನು ಸಂಪರ್ಕಿಸಿ ಉಚಿತವಾಗಿ ವಾದ ಮಾಡುವಂತೆ ಕೋರಿದ್ದರು. ಆ ಕಾಲಕ್ಕೆ ಬಿಲ್ಲವ ಸಮುದಾಯದ ಮಹತ್ತರವಾದ ಶೈಕ್ಷಣಿಕ ಹೆಜ್ಜೆಯಾಗಿ ಗುರುತಿಸಿಕೊಂಡ ಕುದ್ರೋಳಿ ಗೋಕರ್ಣನಾಥ ಕಾಲೇಜಿಗೆ 1,11,111 ರೂಗಳನ್ನು ದೇಣಿಗೆಯ ರೂಪದಲ್ಲಿ ನೀಡಿದ ರಾಮಪ್ಪಣ್ಣ ಅಕ್ಷರದ ಪ್ರೀತಿಯ ಮಹೋನ್ನತ ವ್ಯಕ್ತಿಯಾಗಿದ್ದರು. ಹೋಟೆಲ್ ಉದ್ಯಮದ ಮೂಲಕ ಮಹೋನ್ನತ ಸಾಧನೆಗೇರಿದ ಹಿಂದುಳಿದ ಸಮುದಾಯದ ರಾಮಪ್ಪಣ್ಣನ ಸಾಧನೆ ಸಹಿಸದ ವರ್ಗವು ಅಸೂಯೆಯಿಂದ, ತಮ್ಮ ಹತಾಶೆಯ ನಂಜನ್ನುಕಾರುವ ರೀತಿಯಲ್ಲಿ ರಾಮಪ್ಪಣ್ಣನ ಧೀಮಂತ ವ್ಯಕ್ತಿತ್ವಕ್ಕೆ ಅಪಚಾರವೆಸಗುವ, 'ರಾಂಪ ಜೋಕ್ಸ್' ಗಳನ್ನು ಮುನ್ನೆಲೆಗೆ ತರುವ ಪ್ರಯತ್ನ ಮಾಡಿದರು. ಕರಾವಳಿಯ ಜನಸಮುದಾಯದೊಳಗೆ ರಾಮಪ್ಪಣ್ಣನ ಸಾಧನೆ ತೆರೆಮರೆಗೆ ಸರಿದು, ಜೋಕ್ಸ್‌ಗಳು ಮುನ್ನೆಲೆಗೆ ಬಂದವು. ಪ್ರಸ್ತುತ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ರಾಹುಲ್ ಗಾಂಧಿಯನ್ನು ಇದೇ ಮಾದರಿಗೆ ಒಳಪಡಿಸಿದ ಪರಿಪ್ರೇಕ್ಷೆಯೊಂದು ನಮ್ಮ ಕಣ್ಣಮುಂದಿದೆ.

ಕೇರಳದ 'ತಟ್‌ಕಡ'ಗಳು ಹೆಚ್ಚು ಫೇಮಸ್ ಆಗಲು ಒಂದಿಷ್ಟು ಯೂಟ್ಯೂಬರ್, ಫುಡ್‌ವ್ಲಾಗರ್‌ಗಳೇ ಕಾರಣವೆನ್ನಬಹುದು. ಬೀಫ್, ಕೊತ್ತು ಪರೋಟ,